ಒಬ್ಬ ಅಧಿಕಾರಿ ಸಚಿವರಿಗೆ ನೇರವಾಗಿ ಹೇಳಿದ್ದು ನೋಡಿರಲಿಲ್ಲ.'' ಅಂದ. ''ಅವಕಾಶ ಸಿಕ್ಕಿರೋದು ಸೇವೆ ಮಾಡೋದಿಕ್ಕೆ ಅಂತ ನಂಬಿದ್ದೀನಿ. ಅದಾಗಲ್ಲಾಂದ್ರೆ ಬೇಡ ಬಿಡು'' ಅಂತ ಸಿಡುಕಿದೆ. – ಇದು ಇಪ್ಪತ್ತೈದು ವರ್ಷಗಳ ಸೇವೆಯುದ್ದಕ್ಕೂ ಸಾಗಿ ಬಂದ ಅಸಹಾಯಕತೆಯ ಉಕ್ತಿ!

ಆನಂದರಾಜು ಇನ್ನಷ್ಟು ಬಳಿಸರಿದು, ''ಈಗಾಗ್ಲೆ ಯಾವುದೂ ಬೇಡ ಅಂತ ಬಿಟ್ಟು ಬಂದಿದ್ದೀಯಾ? ಈಗ ಆ ಕೆಲ್ಸನೂ ಬಿಟ್ಬೇಯಾ ಜೋಕೆ. ನನ್ಗೂ ಈ ಮಂತ್ರಿ ಚೆನ್ನಾಗಿ ಗೊತ್ತು. ನಾನು ಮಾತಾಡ್ತೀನಿ ನಡಿ'' ಅಂತ ಕೈ ಹಿಡಿದು ಮುಂದೆ ನಡೆದ.

ಇಬ್ಬರಲ್ಲಿ ನಲವತ್ತು ವರ್ಷಗಳ ಉದ್ದಕ್ಕೂ ಮುಪ್ಪುರಿಗೊಂಡಿದ್ದ ಮಾತು ಬೇಗ ಮುಗಿಯುವಂತಿರಲಿಲ್ಲ. ಕಾಫಿಯ ಕೊನೆ ಗುಟುಕು ಹೀರಿ, ''ಶಿವರಾಜು ನೀನು ಒಬ್ಬಂಟಿ, ಜೊತೆಗೇ ಬಿಗಿ–ಬಿಗುಮಾನ ಬೆಳೆಸ್ಕೊಂಡುಬಿಟ್ಟೆ. ನಮ್ಮ ಗೆಳೆತನಕ್ಕೂ ಅದು ಬೇಕಿತ್ತಾ? ನೋಡು, ರಜೆ ಹಾಕಿ ಊರಿಗೆ ಬಂದುಬಿಡು. ಮುಂದಿನ ಶುಕ್ರವಾರ ಊರಲ್ಲಿ ಜಾತ್ರೆಯಿದೆ. ಅವ್ವ ಜಾತ್ರೆ ಬಂದಾಗೆಲ್ಲ ನಿನ್ನ ನೆನಸಿ ಅವ್ನನ್ಗೆ ಬರಕ್ಕೇಳು ಅಂತಲೇ ಇದ್ದಳು. ಊರುಕೇರಿ ಅಂದ್ರೆ ಅಷ್ಟು ಹಚ್ಕೊಂಡಿದ್ದೋನು ನೀನು. ಬಾ, ಹಳೇದನ್ನೆಲ್ಲ ನೆನೆಸ್ಕೊಂಡ್ರೆ ಫ್ರೆಶ್ ಆಗ್ತೀಯ'' ಆಗ್ರಹಪೂರ್ವಕ ಆಹ್ವಾನ ನೀಡಿದ. 'ಊರಿಗೆ ಬಾ. ಅವ್ವ ಬರಕ್ಕೇಳಿದಳು' ಅನ್ನೊ ಶಬ್ದವೇ ಬೇಗುದಿಯಲ್ಲಿದ್ದ ಮನಸ್ಸಿಗೆ ತಂಪೆರೆದಂತನಿಸಿತು. ನಲವತ್ತು ವರ್ಷಗಳ ಹಿಂದಿನ ಈ ಕರೆಯಲ್ಲಿ ಅದೇನು ಸೆಳೆತ ಇದೆಯೊ ಊರಿಗೆ ಬರಲು ಒಪ್ಪಿಕೊಂಡೆ.



ಆನಂದರಾಜು ಹೇಳಿದಂತೆ, ಬಸ್ಸು ಸಾಲಿಗ್ರಾಮಕ್ಕೆ ಸಂಜೆ 4 ಗಂಟೆಗೆ ಬಂತು. ಬಸ್ಸಿನಿಂದ ಇಳಿದ ಕೂಡಲೆ ಹುಡುಗನೊಬ್ಬ ಬಂದು ಕಿಟ್ಟಿಗೆ ಕೈ ಹಾಕಿದ. ಹುಡುಗನ ಪರಿಚಯವಿರಲಿಲ್ಲ. ಅವನೇ, ''ಶಿವರಾಜ್ ಅಂಕಲ್! ಬನ್ನಿ. ನಾನು ಆನಂದರಾಜು ಮಗ. ಕಾಂಪೌಂಡ್ ಬಳಿ ಬೈಕಿದೆ. ಹೋಗೋಣ'' ಅಂದ. ಮುಖ ಅರಳಿಸಿ ಹುಡುಗನ ನೋಡಿದೆ. ಆನಂದರಾಜುನಂತೆಯೇ ಎತ್ತರ, ಕೋಲುಮುಖ, ಗಿಣಿ ಮೂಗು, ಎಣ್ಣೆಗೆಂಪು ಬಣ್ಣ. ಈ ಹಿಂದೆ ಹುಡುಗನ ನೋಡುವುದಿರಲಿ, ಇವನಪ್ಪನ ಮದುವೆಗೂ ಬಂದಿರಲಿಲ್ಲ. ಹಿಂಗಿರುವಾಗ ಈ ಹುಡುಗ ತನ್ನನ್ನು ಗುರುತಿಸಿ ಅಂಕಲ್ ಅಂತ ಕರೆದದ್ದು ಉಲ್ಲಸಿತಗೊಳಿಸಿತು. ಆನಂದರಾಜು ಗೆಳೆತನಕ್ಕೆ ಕೊಟ್ಟ ಬೆಲೆ ಅನಿಸಿ, ಮನಸ್ಸಿಗೆ ಹಿತವಾಯಿತು. ಹುಡುಗನ ಬೆನ್ನುತಟ್ಟಿ, ''ನನ್ನನ್ನೇನೊ ಶಿವರಾಜ್ ಅಂಕಲ್ ಅಂತ ಕರೆದುಬಿಟ್ಟೆ. ಆದ್ರೆ ನಿನ್ನ ಹೆಸ್ರೇನು ಅಂತ ಹೇಳ್ಳೇಯಿಲ್ಲವಲ್ಲ ರಾಜಾ''' ಅಂದೆ. ಅವನು, ''ಅಂಕಲ್ ನಾನು